ಎಂವಿಸಿ 1598/2020 ಪಿಡಬ್ಲ್ಯೂ 2 ಕುಮಾರ

ಸಾಕ್ಷಿಯನ್ನು ದಿನಾಂಕ 28.11.2024 ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ</u> 3 ನೇ ಎದುರುದಾರರ ಪರ ಶ್ರೀ ಎಸ್.ಸಿ.ಕೆ. ವಕೀಲರಿಂದಃ**

ನಾನು ಮತ್ತು ಮೃತ ಸ್ವಾಮಿಶೆಟ್ಟಿ ಒಂದೇ ಊರಿನವರು. ಅವರು ಮತ್ತು ನಾವು ಸುಮಾರು ವರ್ಷಗಳಿಂದ ಪರಿಚಯವಿರುತ್ತೇವೆ. ಸ್ವಾಮಿಶೆಟ್ಟಿ ರವರು ವ್ಯವಸಾಯ ಮತ್ತು ಹೈನುಗಾರಿಕೆ ಮಾಡುತ್ತಿದ್ದರು. ಮೃತ ಸ್ವಾಮಿಶೆಟ್ಟಿ ನಮ್ಮೊಂದಿಗೆ ಕೂಲಿ ಕೆಲಸಕ್ಕೆ ಬರುತ್ತಿರಲಿಲ್ಲ. ಅಪಘಾತ ತಿಮ್ಮನಕೊಪ್ಪಲು-ದೊಡ್ಡಬ್ಯಾಡರಹಳ್ಳಿ ಮಧ್ಯ ಇರುವ ಹಳ್ಳದ ಬಳಿ ಆಗಿರುತ್ತದೆ. ಅದು ಟಾರು ರಸ್ತೆಯಾಗಿರುತ್ತದೆ. ಸದರಿ ರಸ್ತೆಯು ಸುಮಾರು 10-12 ಅಡಿ ಅಗಲವಿರಬಹುದು. ಆ ರಸ್ತೆಯ 2 ಬದಿಯಲ್ಲಿ ತಲಾ 3 ಅಡಿ ಫುಟ್‌ಪಾತ್ ಇರುತ್ತದೆ. ಅಪಘಾತವಾದ ಸ್ಥಳದಲ್ಲಿ ಲೈಟ್ ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನೊಂದಿಗೆ ಕೂಲಿ ಕೆಲಸಕ್ಕೆ ಹೋಗಿದ್ದ ಇನ್ನೊಬ್ಬ ಸ್ವಾಮಿಶೆಟ್ಟಿ ಇದ್ದರು. ಮೃತ ಸ್ವಾಮಿಶೆಟ್ಟಿ ತಿಮ್ಮನಕೊಪ್ಪಲು ಕಡೆಯಿಂದ ದೊಡ್ಡಬ್ಯಾಡರಹಳ್ಳಿ ಕಡೆಗೆ ಬರುತ್ತಿದ್ದರು. ಅಪಘಾತವಾದ ಸ್ಥಳಕ್ಕೂ, ನನಗೂ ಸುಮಾರು 15 ಅಡಿ ಅಂತರವಿತ್ತು. ಸ್ವಾಮಿಶೆಟ್ಟಿರವರು ನಡೆದುಕೊಂಡು ಬರುವಾಗ ಸದಾನಂದರವರು ಚೇತಕ್ ಸ್ಕೂಟರ್ ನಲ್ಲಿ ಬಂದು ಡಿಕ್ಕಿಪಡಿಸಿ ಅಪಘಾತವನ್ನುಂಟು ಮಾಡಿದರು. ಸದರಿ ಸ್ವಾಮಿಶೆಟ್ಟಿ ರವರು ರಸ್ತೆಯ ಎಡಬದಿಯಲ್ಲಿ ಫುಟ್‌ಪಾತ್ ನಲ್ಲಿ ನಡೆದುಕೊಂಡು ಬರುತ್ತಿದ್ದರು. ಅಪಘಾತ ಉಂಟಾದ ತಕ್ಷಣ ನೋಡಿದೆವು. ಸದಾನಂದರವರು ಹಿಂದಿನಿಂದ ಬಂದು ಡಿಕ್ಕಿಪಡಿಸಿ, ಅಪಘಾತವನ್ನುಂಟು ಮಾಡಿದಾಗ ಶಬ್ದ ಬಂತು, ಆಗ ನಮಗೆ ಅಪಘಾತ ಉಂಟಾಗಿರುವುದು ಗೊತ್ತಾಯಿತು.

ಅಪಘಾತ ಪಡಿಸಿದ ವಾಹನದ ಸಂಖ್ಯೆ 2755 ಎಂದು ಇರುತ್ತದೆ. ಸದರಿ ಸ್ಕೂಟರ್ ನೀಲಿ ಬಣ್ಣದಾಗಿತ್ತು. ಸದರಿ ವಾಹನ ಬೂದು ಬಣ್ಣದ್ದು ಎಂದರೆ ಸರಿಯಲ್ಲ. ಸದರಿ ಸ್ಕೂಟರ್ ನ್ನು ಸದಾನಂದರವರು ಚಲಾಯಿಸುತ್ತಿದ್ದರು, ಸದರಿರವರು ಪಕ್ಕದ ಊರಿನವರಾಗಿರುವುದರಿಂದ ಗೊತ್ತಿರುತ್ತದೆ. ಅವರಿಗೆ ಚಾಲನಾ ಪರವಾನಗಿ ಮತ್ತು ವಿಮೆ ಚಾಲ್ತಿಯಲ್ಲಿದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದೂರನ್ನು ನಾನು ಕೊಟ್ಟಿರುವುದಿಲ್ಲ. ಅಪಘಾತದ ವಿಷಯವನ್ನು ರಾಮಚಂದ್ರ ಮತ್ತು ಯಶವಂತ್ ರವರಿಗೆ ತಿಳಿಸಿರುತ್ತೇನೆ. ನಾನು ಠಾಣೆಗೆ ಹೋಗಿ ದೂರು ನೀಡಿಲ್ಲ.

ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ನಾನು ಮತ್ತು ಸ್ವಾಮಿಶೆಟ್ಟಿರವರು ಸ್ನೇಹಿತರಾಗಿರುವುದರಿಂದ, ಅವರ ಕುಟುಂಬಕ್ಕೆ ಪರಿಹಾರ ಸಿಗಲೆಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ ಮತ್ತು ಎಂಎಸಿಟಿ, ಶ್ರೀರಂಗಪಟ್ಟಣ